ಸಿಸಿ ನಂಃ 2937/2019
ಸಿ.ಡಬ್ಲೂ 1/ಪಿ.ಡಬ್ಲೂ 2

**<u>3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಸಿಜೆಎಂ ರವರ ನ್ಯಾಯಾಲಯ ಧಾರವಾಡ.</u>**

**<u>ಸಿಸಿ ನಂಃ 2937/2019</u>**

| | | |
|---|---|---|
| ಸಾಕ್ಷಿದಾರರ ಹೆಸರು | ಃ | ವಿರಾತಯ್ಯ ಬಳಗೋಡ |
| ತಂದೆಯ ಹೆಸರು | ಃ | ಅಂದಾನೆಯ್ಯ |
| ವಯಸ್ಸು | ಃ | 64 ವರ್ಷ |
| ಉದ್ಯೋಗ | ಃ | ನಿವೃತ್ತ ಶಿಕ್ಷಕರು |
| ವಾಸ ಸ್ಥಳ | ಃ | ಧಾರವಾಡ . |

ಸತ್ಯ ಪ್ರತಿಜ್ಞೆ ಮಾಡಿಸಲಾಯಿತು : **03-11-2023**

ಮುಖ್ಯ ವಿಚಾರಣೆ ಃ ಮಾನ್ಯ ಹಿಸಸಅ ರವರಿಂದ

ನನ್ನ ಮನೆ ಧಾರವಾಡದ ದಾನೇಶ್ವರಿ ನಗರದ ವೀರಭದ್ರೇಶ್ವರ ಪಾರ್ಕದಲ್ಲಿ ಇದೆ . ನಾನು ದಿಃ 01-06-2019 ರಂದು ನನ್ನ ಮನೆ ಕೀಲಿ ಹಾಕಿಕೊಂಡು ಬೆಳಗಾವಿಗೆ ಹೋಗಿದ್ದೆ . ವಾಪಸ್ ದಿಃ 02-06-2019 ರಂದು ರಾಃ 8.00 ಗಂಟೆಗೆ ಬಂದಿದ್ದೆ . ನಾವು ನಮ್ಮ ಮನೆಗೆ ಬಂದು ಕೀ ತೆಗೆದು ಬಾಗಿಲು ತೆಗೆಯಲು ಪ್ರಯತ್ನಿಸಿದಾಗ ಅದು ಒಳಗಡೆಯಿಂದ ಲಾಕ್ ಆಗಿರುವುದು ಕಂಡು ಬಂದಿತ್ತು . ನಂತರ ಹಿಂದುಗಡೆ ಹೋಗಿ ನೋಡಿದಾಗ ಹಿಂದಿನ ಬಾಗಿಲು ತೆಗೆದಿತ್ತು . ಅದಕ್ಕೆ ಒಳಗಡೆಯಿಂದ ಹಾಕಿದ ಚೀಲಕ ಯಾರೋ ತೆಗೆದು ಓಪನ್ ಮಾಡಿದ್ದರು . ನಾವು ಭಯಗೊಂಡು ಒಳಗಡೆ ಹೋಗಿ ನೊಡಿದಾಗ ಬೆಡ್ ರೂಮಿನಲ್ಲಿದ್ದ ವಸ್ತುಗಳು ಚೆಲ್ಲಾ ಪಿಲ್ಲಿಯಾಗಿ ಬಿದ್ದಿದ್ದವು . ಬೆಡ್ ರೂಮಿನಲ್ಲಿ ಅಲ್ಮೇರಾದ ಕೀಲಿ ಯಾರೋ ಮೀಟಿ ತೆಗೆದು ಅದರಲ್ಲಿದ್ದ ಲಾಕರನ್ನು ಸಹ ಮೀಟಿ ತೆಗೆದು ಸದರಿ ಲಾಕರ್ ನಲ್ಲಿದ್ದ ಸುಮಾರು 95 ಗ್ರಾಂ ನ ಬಂಗಾರದ ಆಭರಣಗಳು ಕಳ್ಳತನ ಮಾಡಿಕೊಂಡು ಹೋಗಿದ್ದರು . ಸದರಿ ಅಲ್ಮೇರಾದ ಒಂದು ಬಾಗಿಲನ್ನು ಸಹ ಕಿತ್ತಿ ತೆಗೆದಿದ್ದರು . ನಮ್ಮ ಅಲ್ಮೇರಾದಲ್ಲಿದ್ದ ಒಂದು ಜೊತೆ ಪಾಟಲಿ ಅಂದಾಜು ತೂಕ 20 ಗ್ರಾಂ , ಹಗ್ಗದ ಮಾಟದ ಒಂದು ಚೈನ ಅದರ

ಅಂದಾಜು ತೂಕ 15 ಗ್ರಾಂ , ಮೂರು ಸಣ್ಣ ಉಂಗುರಗಳು , ಲಕ್ಷ್ಮೀ ಪೆಂಡೆಂಟ್ 12 ಗ್ರಾಂ ಹಾಗೂ ಇತರೇ ಆಭರಣಗಳು ಕಳ್ಳತನ ಆಗಿದ್ದವು . ಉಳಿದ ಆಭರಣಗಳ ವಿವರ ನನಗೆ ಈಗ ನೆನಪಿಲ್ಲ . ಸದರಿ ಕಳ್ಳತನ ನಾನು ಮನೆ ಕೀಲಿ ಹಾಕಿಕೊಂಡು ಹೋಗಿ ಮನೆಗೆ ವಾಪಸ್ ಬರುವ ಮಧದ ಅವಧಿಯಲ್ಲಿ ಆಗಿತ್ತು . ಅದೇ ದಿನ ರಾತ್ರಿ ನಾನು ಪೋಲಿಸರಿಗೆ ದೂರು ನೀಡಿದ್ದೆನೆ . ಸದರಿ ದೂರನ್ನು ಈಗ ನೋಡಿ ಗುರುತಿಸಿದ್ದು ಅದನ್ನು ನಿಶಾನೆ-ಪಿ-4 ಎಂದು , ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ-ಪಿ-4 (ಎ) ಎಂದು ಗುರುತಿಸಲಾಯಿತು .

ಪೋಲಿಸರಿಗೆ ಗುನ್ಹಾ ಸ್ಥಳವನ್ನು ನಾನೇ ತೋರಿಸಿದ್ದೆ . ಪೋಲಿಸರು ಸ್ಥಳಕ್ಕೆ ಬಂದು ಪರಿಶೀಲನೆ ಮಾಡಿ, ಪೋಟೋ ತೆಗೆದಿದ್ದರು . ಸದರಿ ಪೋಟೋಗಳು ಈಗ ನಾನು ನೋಡುತ್ತಿರು ವ ನಿಶಾನೆ-ಪಿ-2 ಮತ್ತು 3 ರ ಪೋಟೋಗಳಾಗಿವೆ . ಪೋಲಿಸರು ಸದರಿ ಪಂಚನಾಮೆ ಕಾಲಕ್ಕೆ ಒಂದು ಕೀಲಿ ಜಪ್ತುಪಡಿಸಿಕೊಂಡಿದ್ದರು .

ನಾನು ದೂರು ನೀಡಿದ 3-4 ತಿಂಗಳ ನಂತರ ಪೋಲಿಸರು ನನ್ನ ಕಳುವಾದ ವಸ್ತುಗಳ ಪೋಟೋ ನೀಡಲು ಹೇಳಿದ್ದರು . ನಾನು ನೀಡಿದ್ದೆ . ನಂತರದಲ್ಲಿ ಪೋಲಿಸರು ಸದರಿ ವಸ್ತುಗಳು ಸಿಕ್ಕಿವೆ ಎಂದು ಹೇಳಿದ್ದರು . ಇಬ್ಬರು ಕಳ್ಳರನ್ನು ನನಗೆ ತೋರಿಸಿದ್ದರು . ಆದರೆ ಅವರ ಬಗ್ಗೆ ನನಗೆ ನೆನಪಿಲ್ಲ . ನನ್ನ ಕಳುವಾದ ಎಲ್ಲಾ ಆಭರಗಳು ಸಿಕ್ಕಿದ್ದವು ,ಅವುಗಳನ್ನು ನಾನು ಬಿಡಿಸಿಕೊಂಡಿದ್ದೆನೆ . ಕಳ್ಳರು ಹೆಸರು ನನಗೆ ಹೇಳಿದ್ದರು . ಆದರೆ ಈಗ ನನಗೆ ನೆನಪಿಲ್ಲ . ನನ್ನ ಆಭರಣಗಳನ್ನು ಗುರುತಿಸಿದ ಬಗ್ಗೆ ನನ್ನ ಹೇಳಿಕೆ ನೀಡಿದ್ದೆನೆ . ನಾನು ಬಿಡಿಸಿಕೊಂಡ ನನ್ನ ಸದರಿ ಆಭರಣಗಳ ಪೋಟೋಗಳನ್ನು ಈಗ ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಶಾನೆ-ಪಿ-5 ಮತ್ತು 6 ಎಂದು , ಅವುಗಳ ಸಿಡಿ ನಿಶಾನೆ-ಪಿ-7 ಎಂದು , ( 65 (ಬಿ) ಪ್ರಮಾಣ ಪತ್ರ ಹಾಜರುಪಡಿಸಿರು ಷರತ್ತಿನೊಂದಿಗೆ ) ಗುರುತಿಸಲಾಯಿತು . ಆ ದಿನ ನನ್ನ ಮನೆಯಿಂದ ಜಪ್ತುಪಡಿಸಿಕೊಂಡ ಕೀಲಿ ನೋಡಿದರೆ ಗುರುತಿಸಬಹುದು . ಆ ದಿನ ನನಗೆ ತೋರಿಸಿದ ಕಳ್ಳರನ್ನು ಈಗ ನನಗೆ ಗುರುತಿಸಲು ಆಗುವುದಿಲ್ಲ . ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನಾನು ಈ ಮೊದಲು ನೋಡಿಲ್ಲ .

ಸಿಸಿ ನಂಃ 2937/2019
ಸಿ.ಡಬ್ಲೂ 1/ಪಿ.ಡಬ್ಲೂ 2

(ಈ ಪ್ರಕರಣದಲ್ಲಿ ಜಪ್ತುಪಡಿಸಿಕೊಂಡ ಕೀಲಿ ಹಾಜರುಪಡಿಸದೇ ಇರುವುದರಿಂದ ಮತ್ತು ಮಾನ್ಯ ಹಿಸಸಅ ರವರು ಮುಂದುವರೆದ ಮುಖ್ಯವಿಚಾರಣೆಗೆ ಸಮಯಾವಕಾಶ ಕೇಳಿರುವುದರಿಂದ ನೀಡಲಾಯಿತು. )

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

3 ನೇ ಹೆ ಹಿ ದಿ ನ್ಯಾಹಾಗೂ ಸಿಜೆಎಂ., ಧಾರವಾಡ.